# ಪೊಲೀಸ್ ಆಯುಕ್ತರ ಕಛೇರಿ, ಎ.ಬಿ ಶೆಟ್ಟಿ ವೃತ್ತದ ಬಳಿ, ಮಂಗಳೂರು ನಗರ-575001

**ಈ ಮೇಲ್ ವಿಳಾಸ: ccrmgc@ksp.gov.in**


## ಪೊಲೀಸ್ ಆಯುಕ್ತರು, ಮಂಗಳೂರು ನಗರ ರವರ ನಡವಳಿಗಳು

**ಪ್ರಸ್ತಾವನೆ:**

ದಿನಾಂಕ 07-10-2021 ರಂದು ಭಾರತ ದೇಶದ ಗೌರವಾನ್ವಿತ ರಾಷ್ಟ್ರಪತಿಗಳಾದ ಶ್ರೀ ರಾಮನಾಥ ಕೋವಿಂದ್ ರವರು ಮಂಗಳೂರು ನಗರಕ್ಕೆ ಆಗಮಿಸಲಿದ್ದು, ಮಂಗಳೂರು ನಗರದ ಸರ್ಕ್ಯೂಟ್ ಹೌಸ್‌ನಲ್ಲಿ ವಾಸ್ತವ್ಯ ಹೂಡುವ ಕಾರಣ ಮಾನ್ಯರ ಭದ್ರತೆ ಮತ್ತು ಸುರಕ್ಷತೆಯ ದೃಷ್ಟಿಯಿಂದ ಸರ್ಕ್ಯೂಟ್ ಹೌಸ್‌ನ ಸುತ್ತಲಿನ ರಸ್ತೆಗಳಲ್ಲಿ ವಾಹನ ಸಂಚಾರವನ್ನು ತಾತ್ಕಾಲಿಕವಾಗಿ ಬದಲಿ ಮಾರ್ಗದಲ್ಲಿ ಸಂಚರಿಸುವಂತೆ ಮಾರ್ಪಾಡು ಮಾಡುವುದು ಅವಶ್ಯವಿರುವ ಕಾರಣ ದಿನಾಂಕ 07.10.2021 ರಂದು ಸಂಜೆ 06:00 ಗಂಟೆಯಿಂದ ದಿನಾಂಕ 08.10.2021 ರಂದು ಬೆಳಿಗ್ಗೆ 11:00 ಗಂಟೆಯ ವರೆಗೆ ವಾಹನ ಸಂಚಾರವನ್ನು ನಿಷೇಧಿಸಿ ಈ ಕೆಳಕಂಡಂತೆ ಮಾರ್ಗ ಬದಲಾವಣೆಗೊಳಿಸುವಂತೆ ಕೋರಿ ಎ.ಸಿ.ಪಿ ಸಂಚಾರ ಉಪ ವಿಭಾಗ ಮಂಗಳೂರುರವರು ವರದಿ ಸಲ್ಲಿಸಿರುತ್ತಾರೆ.

ಮೇಲ್ಕಂಡ ಪ್ರಸ್ತಾವನೆಯಲ್ಲಿನ ಅಂಶಗಳನ್ನು ಪರಿಗಣಿಸಿ ಎನ್. ಶಶಿಕುಮಾರ್, ಐ.ಪಿ.ಎಸ್, ಪೊಲೀಸ್ ಆಯುಕ್ತರು ಹಾಗೂ ಅಪರ ದಂಡಾಧಿಕಾರಿಗಳು, ಮಂಗಳೂರು ನಗರ ಆದ ನಾನು ಮೋಟಾರು ವಾಹನ ಕಾಯ್ದೆ 1988 ರ ಕಲಂ 115 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆದೇಶಿಸಿರುತ್ತೇನೆ.

## ಆದೇಶ

**ಸಂಖ್ಯೆ: ಸಿಆರ್‌ಎಂ-3/12/ಅಧಿಸೂಚನೆ/ಮಂ.ನ/2021** ದಿನಾಂಕ: 07/10/2021.

ದಿನಾಂಕ 07.10.2021 ರಂದು ಸಂಜೆ 06:00 ಗಂಟೆಯಿಂದ ದಿನಾಂಕ 08.10.2021 ರಂದು ಬೆಳಿಗ್ಗೆ 11:00 ಗಂಟೆಯ ವರೆಗೆ ರಾಷ್ಟ್ರೀಯ ಹೆದ್ದಾರಿ 66 ರ ಕೆ.ಪಿ.ಟಿ ಜಂಕ್ಷನ್ ನಿಂದ ಸರ್ಕ್ಯೂಟ್ ಹೌಸ್ ಜಂಕ್ಷನ್ ಮುಖಾಂತರ ಬಿಜೈನ ಬಟ್ಟಗುಡ್ಡ ರಸ್ತೆಯಲ್ಲಿ ಸಂಚರಿಸುವ ಎಲ್ಲಾ ತರಹದ ವಾಹನಗಳ ಸಂಚಾರವನ್ನು ನಿಷೇಧಿಸಿ ಈ ಕೆಳಕಂಡ ಮಾರ್ಗದಲ್ಲಿ ಸಂಚರಿಸುವಂತೆ ಮಾರ್ಪಾಡುಗೊಳಿಸಿ ತಾತ್ಕಾಲಿಕ ಅಧಿಸೂಚನೆ ಹೊರಡಿಸಲಾಗಿದೆ.

**ಮಾರ್ಗ ಬದಲಾವಣೆ :**

1) ಕೆಪಿಟಿ ಕಡೆಯಿಂದ ಸರ್ಕ್ಯೂಟ್ ಹೌಸ್ ಜಂಕ್ಷನ್-ಬಟ್ಟಗುಡ್ಡೆ ಮೂಲಕ ನಗರಕ್ಕೆ ಪ್ರವೇಶಿಸುವ ವಾಹನಗಳು ನಂತೂರು ಜಂಕ್ಷನ್ ಮೂಲಕ ನಗರ ಪ್ರವೇಶಿಸುವುದು.
2) ಕೆಎಸ್‌ಆರ್‌ಟಿಸಿ, ಬಿಜೈ ಬಟ್ಟಗುಡ್ಡೆ ಕಡೆಯಿಂದ ಕೆಪಿಟಿ ರಾಷ್ಟ್ರೀಯ ಹೆದ್ದಾರಿ ಕಡೆಗೆ ಸಂಚರಿಸುವ ವಾಹನಗಳು ಕುಂಟಿಕಾನ ಮುಖಾಂತರ ರಾಷ್ಟ್ರೀಯ ಹೆದ್ದಾರಿ ಕಡೆಗೆ ಚಲಿಸುವುದು.
3) ಬಂಟ್ಸ್ ಹಾಸ್ಟೆಲ್ ಸರ್ಕಲ್, ಕದ್ರಿ ಕಂಬಳ ರಸ್ತೆ, ಬಿಜೈ ಬಟ್ಟಗುಡ್ಡೆ ಮುಖಾಂತರ ರಾಷ್ಟ್ರೀಯ ಹೆದ್ದಾರಿಯಲ್ಲಿನ ಕೆಪಿಟಿ ಜಂಕ್ಷನ್ ಕಡೆಗೆ ಸಂಚರಿಸುವ ವಾಹನಗಳು ಬಂಟ್ಸ್ ಹಾಸ್ಟೆಲ್ ಸರ್ಕಲ್ ಮಲ್ಲಿಕಟ್ಟೆ ಮೂಲಕ ರಾಷ್ಟ್ರೀಯ ಹೆದ್ದಾರಿಯಲ್ಲಿನ ನಂತೂರು ಜಂಕ್ಷನ್ ಮುಖಾಂತರ ಮುಂದುವರಿಯುವುದು.

ಮೇಲ್ಕಂಡ ತಾತ್ಕಾಲಿಕ ಅಧಿಸೂಚನೆಯು ಗೌರವಾನ್ವಿತ ರಾಷ್ಟಪತಿಗಳ ಹಾಗೂ ರಾಜ್ಯಪಾಲರ ಬೆಂಗಾವಲು ವಾಹನಗಳಿಗೆ ಹಾಗೂ ತುರ್ತು ಸೇವಾ ವಾಹನಗಳ ಸಂಚಾರಕ್ಕೆ ಅನ್ವಯಿಸುವುದಿಲ್ಲ.

ಈ ಅಧಿಸೂಚನೆಯನ್ನು ದಿನಾಂಕ: 07-10-2021 ರಂದು ನನ್ನ ಸ್ವ ಹಸ್ತ ಸಹಿ ಹಾಗೂ ಮುದ್ರೆಯೊಂದಿಗೆ ಹೊರಡಿಸಿರುತ್ತೇನೆ.

COMMISSIONER OF POLICE
MANGALURU CITY, MANGALURU-575 001

(ಎನ್. ಶಶಿಕುಮಾರ್ ಐಪಿಎಸ್)
ಪೊಲೀಸ್ ಆಯುಕ್ತರು ಮತ್ತು ಅಪರ ದಂಡಾಧಿಕಾರಿಗಳು
ಮಂಗಳೂರು ನಗರ, ಮಂಗಳೂರು.
ಪೊಲೀಸು ಆಯುಕ್ತರು
ಮಂಗಳೂರು ನಗರ, ಮಂಗಳೂರು

ಇವರಿಗೆ:

1) ಜಿಲ್ಲಾಧಿಕಾರಿಯವರು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು
2) ಪ್ರಾದೇಶಿಕ ಸಾರಿಗೆ ಅಧಿಕಾರಿ, ದ.ಕ. ಮಂಗಳೂರು
3) ಸಹಾಯಕ ಕಮೀಷನರ್, ಮಂಗಳೂರು.
4) ತಹಶೀಲ್ದಾರ್, ಮಂಗಳೂರು
5) ಆಯುಕ್ತರು, ಮಂಗಳೂರು ಮಹಾನಗರಪಾಲಿಕೆ
6) ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿ, ದ.ಕ. ಮಂಗಳೂರು ಇವರಿಗೆ ಈ ಅಧಿಸೂಚನೆಯನ್ನು ಜಿಲ್ಲೆಯ ವಾರ್ತೆ ಮಾಧ್ಯಮಗಳಲ್ಲಿ ವಾರ್ತಾ ರೂಪದಲ್ಲಿ ಉಚಿತವಾಗಿ ಪ್ರಚಾರ ಪಡಿಸಲು ಕೋರಿದೆ.
7) ವಿಭಾಗೀಯ ನಿಯಂತ್ರಣಾಧಿಕಾರಿ, ಕೆ.ಎಸ್.ಆರ್.ಟಿ.ಸಿ, ಮಂಗಳೂರು
8) ಪೊಲೀಸು ಅಧೀಕ್ಷಕರು, ದ.ಕ. ಜಿಲ್ಲೆ, ಮಂಗಳೂರು
9) ಉಪ ಪೊಲೀಸು ಆಯುಕ್ತರು (ಅಪರಾಧ ಮತ್ತು ಸಂಚಾರ) ಮಂಗಳೂರು ನಗರ.
10) ಉಪ ಪೊಲೀಸು ಆಯುಕ್ತರು (ಕಾ ಮತ್ತು ಸು) ಮಂಗಳೂರು ನಗರ.
11) ಉಪ ಪೊಲೀಸು ಆಯುಕ್ತರು ಸಿ.ಎ.ಆರ್, ಮಂಗಳೂರು ನಗರ.
12) ಸಹಾಯಕ ಪೊಲೀಸು ಆಯುಕ್ತರು, ಮಂಗಳೂರು ಕೇಂದ್ರ, ದಕ್ಷಿಣ ಮತ್ತು ಸಂಚಾರ ಉಪ ವಿಭಾಗ.
13) ಪೊಲೀಸ್ ನಿರೀಕ್ಷಕರು, ಮಂಗಳೂರು ಸಂಚಾರ ಪಶ್ಚಿಮ, ದಕ್ಷಿಣ, ಉತ್ತರ ಮತ್ತು ಪೂರ್ವ ಪೊಲೀಸ್ ಠಾಣೆ
14) ಅಡ್ಮಿನ್, ಕಂಪ್ಯೂಟರ್ ವಿಭಾಗ, ಪೊಲೀಸ್ ಆಯುಕ್ತರ ಕಛೇರಿ, ಮಂಗಳೂರು ನಗರ
15) ಪೊಲೀಸ್ ನಿರೀಕ್ಷಕರು, ನಿಸ್ತಂತು ಕೊಠಡಿ, ಪೊಲೀಸ್ ಆಯುಕ್ತರ ಕಛೇರಿ, ಮಂಗಳೂರು ನಗರ
16) ವಿಷಯ ನಿರ್ವಾಹಕರು, GNL-1, ಪೊಲೀಸ್ ಆಯುಕ್ತರ ಕಛೇರಿ, ಮಂಗಳೂರು ನಗರ